ಕಷ್ಟಗಳು ಕಾಮೆಡಿಯನ್‌ನಲ್ಲೂ ಕಾಣುತ್ತದೆ, ಆ ಮೂಲಕ ಅದು ಕಾದಂಬರಿಕಾರನ ಕಷ್ಟವೂ ಆಗಿದೆ; ಎಷ್ಟೋ ಬಾರಿ ಬರಹಗಾರನಲ್ಲಿರುವ ಓದುಗಪ್ರಜ್ಞೆಯು ಕತೆಗೆ ಲಗಾಮು ಹಾಕುವ ಹಾಗೆ ಕಾಮಿಡಿ ಶೋದ ಪ್ರೇಕ್ಷಕರು ಕಾಮೆಡಿಯನ್ ಅನಗತ್ಯ ವಿವರಗಳಲ್ಲಿ ಕಳೆದುಹೋಗದ ಹಾಗೆ ಒತ್ತಾಯಿಸುತ್ತಾರೆ; ಈ ಕ್ಷಣ, ಈ ಗಳಿಗೆಯಲ್ಲಿ ಬದುಕು ನಡೆಯಬೇಕು ಎಂಬ ಅನಿವಾರ್ಯ ಒತ್ತಡ ಕಾಮೆಡಿಯನ್‌ನದ್ದೂ ಹೌದು, ಕಾದಂಬರಿಕಾರನದ್ದೂ ಹೌದು; ಕತೆಯು ಕಾಲದ ಚಲನೆಯಲ್ಲಿ ಭೂತ ಮತ್ತು ಭವಿಷ್ಯಕ್ಕೆ ಚಲಿಸಿದರೂ ಆ ಎರಡೂ ಕಾಲವನ್ನು ವರ್ತಮಾನದಲ್ಲಿ ನಿರೂಪಿಸುವ ಜವಾಬ್ದಾರಿ ಇಬ್ಬರದ್ದೂ ಆಗಿದೆ; ಕಾಮೆಡಿಯನ್ನಂತೆಯೇ ಕಾದಂಬರಿಕಾರನಿಗೂ ಕತೆ ಹೇಳುವುದು ಸಾವು–ಬದುಕಿನ ಪ್ರಶ್ನೆ; ಎಷ್ಟೋ ಕಾಲದಿಂದ ತನ್ನೆದೆಯೊಳಗೆ ಹುದುಗಿದ ಗಾಯವನ್ನು ಮತ್ತೊಬ್ಬರ ಜೊತೆ ಹಂಚಿಕೊಳ್ಳುವ ಮೂಲಕ ಅದನ್ನು ತೆರೆದುತೋರಿಸುವ ಕಾಮೆಡಿಯನ್ನನಂತೆಯೇ, ಬರವಣಿಗೆಯೆಂಬ ಸೃಜನಶೀಲತೆಯೂ 'ನಾನೇಕೆ ಬರೆಯುತ್ತೇನೆ?' ಎಂಬ ಪ್ರಶ್ನೆಯ ಹುಡುಕಾಟದ ಮೂಲಕ ನಮ್ಮೊಳಗೆ ಅಡಗಿರುವ ನೋವನ್ನು ಅಭಿವ್ಯಕ್ತಿಸುವ ಕ್ರಿಯೆಯೇ ಆಗಿದೆ.

ನೋಡುತ್ತಿರುವ 'ದೃಷ್ಟಿ'ಯು ನೋಡುತ್ತಿರುವವನ 'ದರ್ಶನ'ವೂ ಆದಾಗ ಮಾತ್ರ ಲೋಕದ ಬಗೆಗಿನ ನಮ್ಮ ಪೂರ್ವಗ್ರಹೀತ ಅಥವಾ ನಿರ್ಧಾರಿತ ಅಭಿಪ್ರಾಯ, ಗ್ರಹಿಕೆಗಳು ಬದಲಾಗುತ್ತವೆ ಎನ್ನುವ ಸತ್ಯವನ್ನು ಈ ಕಾದಂಬರಿಯ ಕಥನತಂತ್ರವು ಹೀಗೆ ಅಡಗಿಸಿಟ್ಟುಕೊಂಡಿದೆ. ದೃಷ್ಟಿಯೇ ದರ್ಶನವಾದಾಗ ಮಾತ್ರ 'ನಿಜ'ವು ಬೇರೆಬೇರೆ ಕೋನದಿಂದ ಬೇರೆಬೇರೆ ಬಗೆಯಲ್ಲಿ ಅನಾವರಣಗೊಳ್ಳುತ್ತದೆ – ಕಾದಂಬರಿಗಳ ಪಾಲಿಟಿಕ್ಸ್ ಇದೇ. ಇದು ಈ ಕಾದಂಬರಿಯ ರಾಜಕಾರಣವೂ ಹೌದು, ಸೃಷ್ಟಿಕ್ರಿಯೆಯ ರಾಜಕಾರಣವೂ ಹೌದು. ಕಾದಂಬರಿಯು 'ಸ್ಟ್ಯಾಂಡ್ ಅಪ್ ಕಾಮೆಡಿಯನ್' ಒಬ್ಬನ ಕಥನ ಎಂಬ ನಮ್ಮ ಮೇಲ್ನೋಟದ ದೃಷ್ಟಿಯನ್ನು ಸರಿಸಿ ಕಾದಂಬರಿಯನ್ನೇ ಕಲೆಯ ಸ್ವರೂಪವನ್ನು ವಿವರಿಸುವ ಕಥನವನ್ನಾಗಿ ಮಾಡುವ ಮೂಲಕ ಗ್ರಾಸ್‌ಮನ್ ಕಾದಂಬರಿ ಪ್ರಕಾರಕ್ಕೆ ಹೊಸ ಆಯಾಮವನ್ನು ನೀಡುತ್ತಾರೆ.

'ಇದು ಹೀಗೇ', 'ಇವರು ಹೀಗೇ/ಇಷ್ಟೇ' ಎಂದು ಫಿಕ್ಸ್ ಆಗಿರುವ ಮನಸ್ಸನ್ನು 'ಇದು ಹೀಗೂ ಇರಬಹುದಲ್ಲವೇ?' ಎಂದು ನೋಡಲು ತೊಡಗಿಸುವ ಮತ್ತು ಆ ಮೂಲಕ ನೋಡುತ್ತಿರುವ ಸಂಗತಿಯ ಆತ್ಮವನ್ನೇ ತೆರೆದುತೋರಿಸುವ ಚಮತ್ಕಾರವನ್ನು ದೊವಾಲೆ ನಮ್ಮೆದುರು ಮಾಡುತ್ತಾನೆ. ಯಾವುದರ ಬಗ್ಗೆಯಾದರೂ ನ್ಯಾಯಾಧೀಶನ ಹಾಗೆ ನಿರ್ಧಾರಿತವಾಗಿ ಮಾತನಾಡುವ ಮೊದಲು ನಾವು ಲೋಕವನ್ನು ಎಷ್ಟೆಷ್ಟು ನಿಟ್ಟಿನಿಂದ ನೋಡಬೇಕು ಎಂಬ ತಿಳಿವಳಿಕೆಯೇ ಕಾದಂಬರಿಯ ಹುಡುಕಾಟ.

ಗ್ರಾಸ್‌ಮನ್‌ರ ಈ ಕಾದಂಬರಿಯು ವ್ಯಕ್ತಿಯೊಬ್ಬನ ಮೂಲಕ ಬಿಚ್ಚಿಕೊಳ್ಳುವ ಸಮುದಾಯದ ಒಳಜಗತ್ತಿನ ಕಥನ. ಇದು ಎಲ್ಲ ಕಾಲದ ಎಲ್ಲ ಮನುಷ್ಯರ ಏಕಾಂತ ಮತ್ತು ಆತಂಕಗಳ ಕಥನ. ಕುಟುಂಬಗಳಲ್ಲಿ ವಿಷಮಯವಾದ ಅಂತರಗಂಗೆಯಂತೆ ಹರಿಯುವ ಕ್ರೌರ್ಯ, ನಿರ್ಲಕ್ಷ್ಯ ಮತ್ತು ಸಂವೇದನಾಶೂನ್ಯತೆಗಳ ದಾಖಲೆ ಇಲ್ಲಿದೆ. ಅಂತಿಮವಾಗಿ ಅದು ಆತ್ಮಹಿಂಸೆಯೂ ಆಗಿಬಿಡುತ್ತದೆ. ದೊವಾಲೆ ತಾನು ಮಾಡದ ತಪ್ಪುಗಳಿಗಾಗಿ ತನ್ನನ್ನು ಶಿಕ್ಷಿಸಿಕೊಳ್ಳುತ್ತಾನೆ. ಈ ಕಾದಂಬರಿಯಲ್ಲಿ ಉತ್ಪ್ರೇಕ್ಷೆಯಂತೆ ಕಾಣುವ ವಿವರಗಳು ನಮ್ಮದೇ ಮನಸ್ಸಿನೊಳಗಿರುವ 'ಕೊಳೆಗೇರಿ'ಗಳಿಗೆ ಕನ್ನಡಿ ಹಿಡಿಯುತ್ತವೆ. ದೊವಾಲೆಯನ್ನು ಕಸದಂತೆ ಕಂಡು ತಾನು 'ಉತ್ತಮ'ನೆಂದು ಹೊರಡುವ ಲಜಾರ್ ಸ್ವತಃ ತಾನು 'ಸ್ನೇಹಧರ್ಮ'ವನ್ನು